# ಸ್ಪಷ್ಟ ಕನ್ನಡ ಕಲಿತೆ ಎನ್ನುವ ಹೆಮ್ಮೆ



**ರಚನಾ ಸ್ಮಿತ್**

ಝಿ ಕನ್ನಡ 'ಕಮಲಿ'ಯ ಅನಿಕಾ ಮಹಾಜನ್

★ *ನಟಿಯಾಗಿದ್ದು ಏಕೆ?*

ಕ್ಯಾಮೆರಾ ಎದುರುಗೊಳ್ಳಬೇಕು ಎನ್ನುವುದು ಏಳೆಂಟು ವರ್ಷಗಳ ಕನಸು. ಅದಕ್ಕಿಂತ ಮುಂಚೆ ಏನಾಗಬೇಕು ಎಂದು ಗೊತ್ತಿರಲಿಲ್ಲ. ಪಿಯುಸಿ ಓದುವ ಹೊತ್ತಿಗೆ ಮಾಡೆಲಿಂಗ್ ಆರಂಭಿಸಿದೆ. ಪ್ರಸಾದ್ ಬಿದ್ದಪ್ಪ ಅವರು ಝೂಮ್ ಹಿಂದಿ ವಾಹಿನಿಯಲ್ಲಿ ನಡೆಸಿಕೊಡುತ್ತಿದ್ದ ಸೌಂದರ್ಯ ಸಂಬಂಧಿ ಕಾರ್ಯಕ್ರಮದಲ್ಲಿ ಒಂದು ವರ್ಷ ಕೆಲಸ ಮಾಡಿದೆ. ಅದನ್ನು ಮಾಡುತ್ತಿದ್ದಾಗ ನನಗೆ ನಟಿಯಾಗಬೇಕು ಎನ್ನುವ ಆಶೆ ಮೂಡಿತು. ಹುಡುಕಾಟ ಆರಂಭಿಸಿದ ಕೆಲವೆ ದಿನಗಳಲ್ಲಿ ಸುದೀಪ್ ಅವರ 'ವರದನಾಯಕ'ದಲ್ಲಿ ಪುಟ್ಟ ಪಾತ್ರವನ್ನು ನಿರ್ವಹಿಸಿದೆ. ನಂತರ ತೆಲುಗಿನಲ್ಲಿ ಎರಡು ಸಿನಿಮಾಗಳಲ್ಲಿ ನಟಿಸಿದೆ. 'ಕಮಲಿ'ಯಲ್ಲಿ ಪ್ರಧಾನ ಪಾತ್ರ ಸಿಕ್ಕಿದೆ. ಅದನ್ನು ನಿರ್ವಹಿಸುತ್ತಿದ್ದೇನೆ.

★ *'ಕಮಲಿ'ಯಲ್ಲಿ ಕಲಿತದ್ದು ಏನು?*

ನಾನು ಆಂಗ್ಲೊ ಇಂಡಿಯನ್. ಅಪ್ಪ ಡಾನ್‌ಫರ್ಡ್ ಯೂರೋಪ್‌ನಲ್ಲಿ ಉದ್ಯೋಗಿಯಾಗಿದ್ದರು. ಅಮ್ಮ ಶರಿಲ್ ಸ್ಮಿತ್ ಗೃಹಿಣಿ. ನಾನು ಬೆಂಗಳೂರಿನಲ್ಲಿ ಓದಿದ್ದರಿಂದ ಸ್ವಲ್ಪ ಕನ್ನಡ ಗೊತ್ತಿತ್ತು. ಸ್ವಲ್ಪ ಓದು ಬರಹ ಕೂಡ ಕಲಿತಿದ್ದೇನೆ. ಆದರೆ ಉಚ್ಚರಣೆಯಲ್ಲಿ ಸ್ಪಷ್ಟತೆ ಇರಲಿಲ್ಲ. ನಿರರ್ಗಳವಾಗಿ ಮಾತನಾಡುವುದು ಕಷ್ಟ ಇತ್ತು. ಈಗ ತುಂಬಾ ಕಲಿತಿದ್ದೇನೆ. ಅದು ನನಗೆ ಹೆಮ್ಮೆಯ ಸಂಗತಿ. ಈಗ ನಿಮ್ಮ ಜೊತೆ ಇಷ್ಟೆಲ್ಲಾ ಕನ್ನಡದಲ್ಲಿ ಮಾತನಾಡಲು ಸಾಧ್ಯವಾಗಿದ್ದು ಕಮಲಿಯಿಂದ. ಅದಕ್ಕೆ ಒಟ್ಟು ಹತ್ತು ಸುತ್ತಿನಲ್ಲಿ ಆಡಿಷನ್ ಮಾಡಿದ್ದರು. ಅದರಲ್ಲಿ ಕನ್ನಡ ಉಚ್ಚರಣೆ ಸ್ಪಷ್ಟತೆ ಇಲ್ಲದ ನನ್ನನ್ನು ತೆಗೆದುಕೊಂಡು ಭಾಷಾ ಸ್ಪಷ್ಟತೆಯನ್ನು ಕಲಿಸಿದ ತಂಡಕ್ಕೆ ನನ್ನ ಕೃತಜ್ಞತೆಗಳು.

★ *ನಿಮ್ಮ ಪಾತ್ರ ನಿಮಗೆ ಹಿಡಿಸಿದೆಯಾ?*

ಭಯಂಕರ ಖಳನಾಯಕಿ ಪಾತ್ರ. ಚಾಲೆಂಜಿಂಗ್ ಆಗಿದೆ. ನನಗೆ ತುಂಬಾ ಇಷ್ಟವಾಗಿದೆ. ರಚನಾ ಸ್ಮಿತ್ ಆಗಿ ಕಥೆ ನೋಡಿದರೆ, ನನಗೂ ಅಲಿಕಾಗೂ ತುಂಬಾ ವಿರೋಧಾಬಾಸ ಇದೆ. ನಾನಲ್ಲದ ನಾನು ಅಲಿಕಾ ಪಾತ್ರವಾಗಿ ಹೇಳುವುದಾದರೆ ಅದ್ಭುತವಾಗಿದೆ. ಇದು ತ್ರಿಕೋನ ಪ್ರೀತಿಯ ಪ್ರಕರಣದ ಕಥೆ. ಕಮಲಿ ಹಳ್ಳಿ ಹುಡುಗಿ, ಅನಿಕಾ ಬೆಂಗಳೂರಿನ ಹುಡುಗಿ. ಕಮಲಿ ಕಬಡ್ಡಿ ತಂಡ ನಮ್ಮ ತಂಡವನ್ನು ಸೋಲಿಸುತ್ತದೆ. ನಂತರ ಅವಳು ನಮ್ಮ ಕಾಲೇಜಿಗೆ ಬಂದು ಸೇರುತ್ತಾಳೆ. ಕಾಲೇಜಿನಲ್ಲಿ ನನ್ನ ಪ್ರಾಮುಖ್ಯತೆಯನ್ನು ಹಿನ್ನೆಲೆಗೆ ತಂದು ಅವಳೆ ಮಿಂಚುತ್ತಾಳೆ. ಅದು ನನ್ನಲ್ಲಿ ದ್ವೇಷವನ್ನು ಉಂಟುಮಾಡಿದೆ. ಜೊತೆಗೆ ನಾನು ಪ್ರೀತಿಸುವ ಹುಡುಗನನ್ನೇ ಆಕೆಯೂ ಪ್ರೀತಿಸುತ್ತಿದ್ದಾಳೆ. ನನ್ನ ಬಯಕೆ ಈಡೇರಿಸಿಲು ಆಕೆಯನ್ನು ಹಿಮ್ಮೆಟ್ಟಲು ಎಲ್ಲಾ ಕುತಂತ್ರಗಳನ್ನು ಹೆಣೆಯುತ್ತಿದ್ದೇನೆ.

★ *ಹಾಲಿವುಡ್‌ಗೆ ಹಾರುವ ಯೋಚನೆ ಇದೆಯಾ?*

ಖಂಡಿತ. ಕನಸುಗಳು ಹಲವಾರು ಇವೆ. ಮೊದಲು ಕನ್ನಡದಲ್ಲಿ ಒಳ್ಳೆಯ ಐಡೆಂಟಿಟಿ ನನಗೆ ಸಿಗಬೇಕು. ನಾನು ಈಗ ಕನ್ನಡಿಗಳು. ನಂತರ ದೇಶ ವಿದೇಶವನ್ನು ಪ್ರತಿನಿಧಿಸಲು ಅವಕಾಶಗಳನ್ನು ನೋಡಬಹುದು. ಸದ್ಯ ಕನ್ನಡದಲ್ಲಿಯೇ ಹೆಚ್ಚು ತೊಡಗಿಸಿಕೊಳ್ಳಬೇಕು ಎಂದುಕೊಂಡಿದ್ದೇನೆ.

■ ರಾಘವೇಂದ್ರ